ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ

ಬೆಂಗಳೂರು-01

ಸಂಖ್ಯೆ:DPI-CPIOPE(SPAT)14/2025 E-1940218 ದಿನಾಂಕ:13.11.2025

**ಜ್ಞಾಪನ**

ವಿಷಯ; ಮಕ್ಕಳಿಗೆ ಶಾಲಾ ಸಮಯದಲ್ಲಿ ಆಟದ ಅವಧಿಗಳನ್ನು ಕಡಿತಗೊಳಿಸದಂತೆ ನಿರ್ದೇಶಿಸುವ ಬಗ್ಗೆ

ಉಲ್ಲೇಖ; 1 ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೊಗ ಪತ್ರ ದಿ:21.10.2025

******

ಮೇಲ್ಕಂಡ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ವಿವಿಧ ಭಾಗಗಳಲ್ಲಿ ಮಕ್ಕಳೊಂದಿಗೆ ನಡೆಸಿದ ಸಂವಾದ ಶಾಲಾ ಬೇಟಿಯ ಸಮಯದಲ್ಲಿ 10ನೇ ತರಗತಿಯ ಮಕ್ಕಳು ವೇಳಾಪಟ್ಟಿಯಲ್ಲಿ ನಿಗದಿಗೊಳಿಸಿದ ಆಟದ ಅವಧಿಯನ್ನು ನಡೆಸದೇ ಇರುವುದು ಗಮನಿಸಲಾಗಿರುತ್ತದೆ. ಆಟ ಕಲೆ ಇನ್ನಿತರ ಪಠ್ಯೇತರ ಚಟುವಟಿಕೆಗಳು ಮಕ್ಕಳ ಸಮಗ್ರ ವೈಯಕ್ತಿಕ ವಿಕಾಸದ ಅವಿಭಾಜ್ಯ ಅಂಗವಾಗಿದ್ದು ಇದನ್ನು ಮನಗೊಂಡು ವಿಶ್ವಸಂಸ್ಥೆಯು ಜೂನ್ 11ರಂದು ಪ್ರತಿವರ್ಷ ಅಂತರಾಷ್ಟ್ರೀಯ ಆಟದ ದಿನವೆಂದು ಗುರುತಿಸಲಾಗಿದೆ. ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಶಾಲಾ ಉತ್ತಮ ಫಲಿತಾಂಶ ಗಳಿಸಬೇಕೆಂಬ ಒಂದು ಕಾರಣದಿಂದ ಮಕ್ಕಳ ಆಟಗಳನ್ನು ನಿರ್ಬಂಧಿಸುತ್ತಿರುವುದು ವಿಪರ್ಯಾಸದ ಸಂಗತಿ. ಇದು ಮಕ್ಕಳ ಕಲಿಕೆಯ ಮೇಲೆಯೂ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 31ರ ಪ್ರಕಾರ ಆಟ ಮಕ್ಕಳ ಹಕ್ಕು. ಅದನ್ನು ನಿರ್ಭಂಧಿಸುವುದು ಮಕ್ಕಳ ಅಭಿವೃದ್ಧಿ ಹೊಂದುವ ಹಕ್ಕಿನ ಉಲ್ಲಂಘನೆ ಯಾಗುತ್ತದೆ ಅದನ್ನು ತಡೆಗಟ್ಟುವ ಬಗ್ಗೆ ಸಂಬಂಧಪಟ್ಟ ವರಿಗೆ ಶಾಲಾ ವೇಳಾಪಟ್ಟಿಯಂತೆ ಆಟದ ಅವಧಿಯನ್ನು ಕಡ್ಡಾಯವಾಗಿ ನಡೆಸಲು ಸೂಕ್ತ ನಿರ್ದೇಶನ ನೀಡಲು ಕೋರಿದ್ದಾರೆ.

ಪ್ರಸುತ್ತ 2025-26 ನೇ ಸಾಲಿನ ಶಾಲಾ ವೇಳಾಪಟ್ಟಿಯಲ್ಲಿ ನಿಗಧಿಪಡಿದ ದೈಹಿಕ ಶಿಕ್ಷಣದ ಸಮಯವನ್ನು ಕಡ್ಡಾಯವಾಗಿ ಎಲ್ಲಾ ಸರ್ಕಾರಿ/ ಅನುದನಿತ/ ಅನುದಾನರಹಿತ ಶಾಲೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ ತಿಳಿಸುತ್ತ ತಮ್ಮ ಅಧೀನದಲ್ಲಿ ಬರುವ ಕ್ಷೇತ್ರ ಶಿಣಾಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ದೈಹಿಕ ಶಿಕ್ಷಣದ ಸಮಯವನ್ನು ಅದಕ್ಕಾಗಿ ಮೀಸಲಿಡುವಂತೆ ನಿರ್ದೇಶನ ನೀಡಲು ಸೂಚಿಸಿದೆ,

(ಕಛೇರಿ ಟಿಪ್ಪಣಿ ಮಾನ್ಯ ನಿರ್ದೇಶಕರು( ಮೈನಾರಟಿ) ಅನುಮೋದಿಸಿದೆ)

13/11/25

ಸಹ ನಿರ್ದೇಶಕರು( ದೈಹಿಕ ಶಿಕ್ಷಣ )
ಶಾಲಾ ಶಿಕ್ಷಣ ಇಲಾಖೆ

ಪ್ರತಿಯನ್ನು;-

1, ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ

2, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೊಗ 4ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ಬೆಂಗಳೂರು-560001 ರವರ ಮಾಹಿತಿಗಾಗಿ

3, ಕಛೇರಿ ಪತ್ರ

17/11/25